JANUARY 27, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- 76ನೇ ಗಣರಾಜ್ಯೋತ್ಸವ; "ಸ್ವರ್ಣಿಮ್ ಭಾರತ; ವಿರಾಸತ್ ಮತ್ತು ವಿಕಾಸ" ಧ್ಯೇಯದೊಂದಿಗೆ, ನಾಡಿನಾದ್ಯಂತ ಸಂಭ್ರಮದಿಂದ ಆಚರಣೆ.
- ಜಾನಪದ ಕಲೆ ಗೋಂಧಳಿಯ ಎಲ್ಲ ಕಲಾವಿದರ ಪರವಾಗಿ, ಪದ್ಮ ಪುರಸ್ಕಾರ ಸ್ವೀಕಾರ – ವೆಂಕಪ್ಪ ಸುಗತೇಕರ.
- ಪಶ್ಚಿಮಘಟ್ಟ ರಕ್ಷಿಸುವ ಬದ್ಧತೆಯನ್ನು, ಯೋಜನೆಗಳ ಮೂಲಕ ತೋರ್ಪಡಿಸುವಂತೆ, ಪರಿಸರಾಸಕ್ತರ ಒತ್ತಾಯ.
- ಖಾಸಗಿ ಹಣಕಾಸು ಸಂಸ್ಥೆಗಳ ಕಿರುಕುಳ; ಜನತೆ ದೂರು ನೀಡಿದರೆ, ತಕ್ಷಣ ಕಾನೂನು ಕ್ರಮಕ್ಕೆ, ಮುಖ್ಯಮಂತ್ರಿ ಸೂಚನೆ.

<><><>

ಈಗ ವಾರ್ತೆಗಳ ವಿವರ

<><><>

76ನೇ ಗಣರಾಜ್ಯೋತ್ಸವ, "ಸ್ವರ್ಣಿಮ್ ಭಾರತ; ವಿರಾಸತ್ ಮತ್ತು ವಿಕಾಸ" ಘೋಷ ವಾಕ್ಯದಡಿ ಹೆಜ್ಜೆಯಿರಿಸುವ ಗುರಿಯೊಂದಿಗೆ, ನಾಡಿನಾದ್ಯಂತ ಸಂಭ್ರಮದಿಂದ ಆಚರಿಸಲ್ಪಟ್ಟಿತು.

<><><>

ಹೊಸ ದಿಲ್ಲಿಯ ಕರ್ತವ್ಯ ಪಥದಲ್ಲಿ ಗದಗ ಜಿಲ್ಲೆ, ಐತಿಹಾಸಿಕ ಲಕ್ಕುಂಡಿಯ, ಚಾಲುಕ್ಯ ವಾಸ್ತುಶಿಲ್ಪದ ಬ್ರಹ್ಮ ಜಿನಾಲಯ ಸ್ತಬ್ಧಚಿತ್ರ ಎಲ್ಲರ ಗಮನ ಸೆಳೆಯಿತು.

<><><>

ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ, ಎನ್.ವಿ.ಅಂಜಾರಿಯಾ ಅವರು, ಬೆಂಗಳೂರು ಹೈಕೋರ್ಟ್‌ನಲ್ಲಿ ಧ್ವಜಾರೋಹಣ ನೆರವೇರಿಸಿ, ಜನರಿಗೆ ನ್ಯಾಯ ದೊರಕಿಸುವಲ್ಲಿ, ನ್ಯಾಯಾಂಗದ ಪಾತ್ರ ಹಿರಿದು ಎಂದರು.

<><><>

ಹಿರಿಯ ನ್ಯಾಯಮೂರ್ತಿ ಬಿ.ಎಂ.ಶ್ಯಾಮಪ್ರಸಾದ್ ಅವರು, ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠದಲ್ಲಿ, ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು. ಸಂವಿಧಾನವೇ ಪರಮೋಚ್ಛ ಎಂದರು.

<><><>

ಕಲಬುರಗಿ ಉಚ್ಚ ನ್ಯಾಯಾಲಯದಲ್ಲಿ ಹಿರಿಯ ನ್ಯಾಯಮೂರ್ತಿ ಎಸ್.ಸುನೀಲದತ್ತ ಯಾದವ್ ಅವರು, ಧ್ವಜಾರೋಹಣ ನೆರವೇರಿಸಿ, ಪ್ರಜಾಪ್ರಭುತ್ವಕ್ಕೆ ಸಂವಿಧಾನವೇ ಅಡಿಪಾಯ ಎಂದರು.

<><><>

ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ, ಉಪ ಕುಲಪತಿ ಪಿ. ಎಲ್. ಪಾಟೀಲ ಧ್ವಜಾರೋಹಣ ನೆರವೇರಿಸಿ, ಕೇಂದ್ರ ಸರ್ಕಾರ ಜಾರಿಗೆ ತಂದ, ರಾಷ್ಟ್ರೀಯ ಎಣ್ಣೆಕಾಳು ಅಭಿವೃದ್ಧಿ ಯೋಜನೆ, ರಾಷ್ಟ್ರೀಯ ನೈಸರ್ಗಿಕ ಕೃಷಿ ಯೋಜನೆ ಹಾಗೂ ಸಾವಯವ ಕೃಷಿ ಯೋಜನೆ, ಕೃಷಿ ರಂಗದ ಸುಸ್ಥಿರ ಬದಲಾವಣೆಗೆ ಕಾರಣೀಭೂತವಾಗಿವೆ, ಎಂದರು.

<><><>

ಬೀದರ್ ಜಿಲ್ಲಾ ಕ್ರೀಡಾಂಗಣದಲ್ಲಿ ಈಶ್ವರ ಖಂಡ್ರೆ, ಕಲಬುರಗಿ ಜಿಲ್ಲಾ ಕ್ರೀಡಾಂಗಣದಲ್ಲಿ ಪ್ರಿಯಾಂಕ್ ಖರ್ಗೆ, ಧ್ವಜಾರೋಹಣ ನೆರವೇರಿಸಿ, ಗಣರಾಜ್ಯೋತ್ಸವ ಸಂದೇಶ ನೀಡಿ, ಸಮಾನತೆ ಸಾಂವಿಧಾನಿಕ ಹಕ್ಕು. ಶಾಂತಿ, ಸಹಬಾಳ್ವೆಯಿಂದ ಬಾಳಲು, ಈ ಜಗದ ಮಕ್ಕಳೆಲ್ಲರೂ ಸೇರಿ, ದೇಶವನ್ನು ಕಟ್ಟಬೇಕಿದೆ ಎಂದರು.

<><><>

ರಾಯಚೂರಿನ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಶರಣಪ್ರಕಾಶ ಪಾಟೀಲ ಅವರು, ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು.

<><><>

ಗಣರಾಜ್ಯೋತ್ಸವದ ಹಿನ್ನೆಲೆ, ಯಾದಗಿರಿ ಜಿಲ್ಲಾ ಕ್ರೀಡಾಂಗಣದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ, ಶರಣಬಸಪ್ಪ ದರ್ಶನಾಪುರ, ಧ್ವಜಾರೋಹಣ ನೆರವೇರಿಸಿ, ಗೌರವ ವಂದನೆ ಸ್ವೀಕರಿಸಿದರು.

<><><>

ಮುಂದಿನ ಸಚಿವ ಸಂಪುಟ ಸಭೆಯಲ್ಲಿ, ಬಳ್ಳಾರಿಯಲ್ಲಿ ನಿರ್ಮಾಣಗೊಳ್ಳಲಿರುವ, 'ಜೀನ್ಸ್ ಹಬ್, ಅಪೆರಲ್ ಪಾರ್ಕ್' ವಿ 'ಯವನ್ನು, ಚರ್ಚಿಸಲಾಗುವುದು ಎಂದು, ಪೌರಾಡಳಿತ ಖಾತೆ ಸಚಿವ ರಹೀಂ ಖಾನ್ ತಿಳಿಸಿದ್ದಾರೆ. ಬಳ್ಳಾರಿಯಲ್ಲಿ, ಗಣರಾಜ್ಯೋತ್ಸವ ಸಮಾರಂಭದ ಬಳಿಕ, ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ನೀಡಿದ, ಐದು ಸಾವಿರ ಕೋಟಿ ರೂಪಾಯಿಗಳನ್ನು, ಮುಖ್ಯಮಂತ್ರಿಯವರು ಯೋಜನಾಬದ್ಧವಾಗಿ ಖರ್ಚು ಮಾಡಲು ಸೂಚಿಸಿದ್ದಾರೆ ಎಂದರು.

<><><>

2023ರ ಸಪ್ಟೆಂಬರ್ 5 ರಿಂದ, ಇಂದಿನ ವರೆಗೆ, ರಾಜ್ಯದ ಎಲ್ಲ ಶಾಲೆಗಳಲ್ಲಿ, ಸಂವಿಧಾನದ ಪೀಠಿಕೆ ಓದುವ ಮೂಲಕ, ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಸಾಕಾರ ಗೊಳಿಸಲಾಗುತ್ತಿದೆ ಎಂದು, ಶಾಲಾ ಶಿಕ್ಷಣ ಖಾತೆ ಸಚಿವ, ಮಧು ಬಂಗಾರಪ್ಪ ಹೇಳಿದ್ದಾರೆ. ಗಣರಾಜ್ಯೋತ್ಸವದ ಹಿನ್ನೆಲೆ, ಶಿವಮೊಗ್ಗದ ಅಲ್ಲಮಪ್ರಭು ಉದ್ಯಾನದಲ್ಲಿ, ಸಂವಿಧಾನದ ಪೀಠಿಕೆಯನ್ನು ಸಾಮೂಹಿಕವಾಗಿ ವಾಚಿಸಿ, ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ರಾಜ್ಯದ 1 ಕೋಟಿ 8 ಲಕ್ಷ ವಿದ್ಯಾರ್ಥಿಗಳು, ಪ್ರತಿದಿನ ಶಾಲೆಯಲ್ಲಿ ಸಂವಿಧಾನ ಪೀಠಿಕೆಯನ್ನು ಓದುತ್ತಿದ್ದಾರೆ. ಸಂವಿಧಾನದ ಮಹತ್ವವನ್ನು ಮಕ್ಕಳಿಗೆ ತಿಳಿಸುವ ಧ್ಯೇಯ ಸಾಕಾರಗೊಂಡಿದೆ ಎಂದರು.

<><><>

ಡೆಸ್ಕ್ ವರದಿ

<><><>

ಬಾಗಲಕೋಟೆಯ ಖ್ಯಾತ ಗೋಂಧಳಿ ಜಾನಪದ ಕಲಾವಿದ, ವೆಂಕಪ್ಪ ಅಂಬಾಜಿ ಸುಗತೇಕರ ಅವರಿಗೆ, ಕೇಂದ್ರ ಸರ್ಕಾರ ಪದ್ಮಶ್ರೀ ಪ್ರಶಸ್ತಿ ಘೋಷಿಸಿದೆ. 81 ವರ್ಷದ ಸುಗತೇಕರ, ಅನಕ್ಷರಸ್ಥರಾಗಿದ್ದರೂ, ಬಾಲ್ಯದಿಂದ ಗೋಂಧಳಿ ಕಲೆಯನ್ನು ಮೈಗೂಡಿಸಿಕೊಂಡಿದ್ದಾರೆ. ಆಕಾಶವಾಣಿ, ದೂರದರ್ಶನ ಹಿರಿಯ ಕಲಾವಿದರಾಗಿದ್ದಾರೆ. ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದ ವಿವಿಧ ಉತ್ಸವ, ಸಮ್ಮೇಳನಗಳಲ್ಲಿ ಅವರು, ಮಿಂಚಿದ್ದಾರೆ.

<><><>

ಈ ಕುರಿತು ಮಾಹಿತಿ ನೀಡಿದ್ದಾರೆ, ಧಾರವಾಡ ಆಕಾಶವಾಣಿಯ, ಪ್ರಾದೇಶಿಕ ಸುದ್ದಿ ವಿಭಾಗದ, ಸಂಪಾದಕೀಯ ಕಾರ್ಯನಿರ್ವಾಹಕ ವಿವೇಕಾದಿತ್ಯ.

<><><>

*ಗೋಂಧಳಿ ಜಾನಪದ ಕಲಾ ಲೋಕಕ್ಕೆ ವೆಂಕಪ್ಪ ಅಂಬಾಜಿ ಸುಗತೇಕರ ಅವರು, ನೀಡಿರುವ ಕೊಡುಗೆಯನ್ನು ಪ್ರಧಾನಮಂತ್ರಿ ನರೇಂದ್ರ ಮೋದಿಯವರು, ಮನ್ ಕಿ ಬಾತ್‌ನಲ್ಲಿ ಸಹ ಉಲ್ಲೇಖಿಸಿ, ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.*

*ಹಾವೇರಿ ಜಿಲ್ಲೆ, ಶಿಗ್ಗಾಂವಿ ತಾಲೂಕು ಗೊಟಗೋಡಿಯ ಜಾನಪದ ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ನೀಡಿ, ಗೌರವಿಸಿದೆ. ರಾಜ್ಯೋತ್ಸವ ಪ್ರಶಸ್ತಿ ಹಾಗೂ ಜಾನಪದ ಅಕಾದೆಮಿ ಪುರಸ್ಕಾರ ಸೇರಿದಂತೆ ಅನೇಕ ಪ್ರಶಸ್ತಿಗಳು ಅವರಿಗೆ ಸಂದಿವೆ.*

*ಒಂದು ಸಾವಿರಕ್ಕೂ ಅಧಿಕ ಗೋಂಧಳಿ ಜಾನಪದ ಹಾಡುಗಳನ್ನು ಅವರು, ಹಾಡಬಲ್ಲರು. 150ಕ್ಕೂ ಹೆಚ್ಚು ಗೋಂಧಳಿ ಕಥೆಗಳನ್ನು ಹೇಳುವ ಮೂಲಕ ಮಕ್ಕಳಲ್ಲಿ ಕಥೆಗಳ ಬಗ್ಗೆ ಆಸಕ್ತಿ ಹಾಗೂ ಮೂಲೆ ಗುಂಪಾಗುತ್ತಿರುವ ಗೋಂಧಳಿ ಹಾಡುಗಳನ್ನು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಕಲಿಸಿದ್ದಾರೆ.*

*ವೆಂಕಪ್ಪ ಸುಗತೇಕರ, ಹೊಸದಿಲ್ಲಿಯ ಗಣರಾಜ್ಯೋತ್ಸವ ಸಂಭ್ರಮಾಚರಣೆಯ ವಿಶೇಷ ಆಹ್ವಾನಿತರಾಗಿ ಪಾಲ್ಗೊಂಡಿದ್ದು, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.*

<><><>

ವೆಂಕಪ್ಪ ಅಂಬಾಜಿ ಸುಗತೇಕರ ಧ್ವನಿ 50 + ವಿವೇಕ 49 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಉತ್ತರಕನ್ನಡ ಜಿಲ್ಲೆಯ ಶಿರೂರು, ದಕ್ಷಿಣಕನ್ನಡ ಜಿಲ್ಲೆಯ ಶಿರಾಡಿ ಹಾಗೂ ಕೊಡಗು ಜಿಲ್ಲೆಗಳಲ್ಲಿ ಸಂಭವಿಸಿದ, ಗುಡ್ಡ ಕುಸಿತ ಹಾಗೂ ಕಾಡ್ಗಿಚ್ಚು, ಪಶ್ಚಿಮಘಟ್ಟಗಳ ರಕ್ಷಣೆ ಹಾಗೂ ಪ್ರಕೃತಿ ಪೂರಕ ಅಭಿವೃದ್ಧಿಯ ಅಗತ್ಯತೆಯನ್ನು ಒತ್ತಿ ಹೇಳುತ್ತದೆ ಎಂದು, ಸಹ್ಯಾದ್ರಿ ಸಂಚಯ ಸಂಸ್ಥೆಯ ಸಂಚಾಲಕ, ಮಂಗಳೂರಿನ ದಿನೇಶ ಹೊಳ್ಳ ಹೇಳಿದ್ದಾರೆ. ಪಶ್ಚಿಮಘಟ್ಟದ ವಿಶಿಷ್ಟ ಸಸ್ಯ ಸಂಪತ್ತು ಹಾಗೂ ಪ್ರಾಣಿ ಸಂಕುಲವನ್ನು ಸಂರಕ್ಷಿಸುವ ಬದ್ಧತೆ, ಯೋಜನೆಗಳ ಮೂಲಕ ತೋರ್ಪಡಿಸಬೇಕು ಎಂದು, ಅವರು ಒತ್ತಾಯಿಸಿದ್ದಾರೆ.

<><><>

ಪರಿಸರವಾದಿ ದಿನೇಶ ಹೊಳ್ಳ 50 ಸೆಕೆಂದುಗಳು

<><><>

ರಾಜ್ಯದ ಜನತೆಗೆ, ಖಾಸಗಿ ಹಣಕಾಸು ಸಂಸ್ಥೆಗಳು ಕಿರುಕುಳ ನೀಡುತ್ತಿದ್ದರೆ, ಅಂಥವರ ವಿರುದ್ಧ, ದೂರು ನೀಡಿದಲ್ಲಿ, ತಕ್ಷಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ಮೈಕ್ರೋ ಫೈನಾನ್ಸ್‌ನವರು ಸಾಲ ವಸೂಲಾತಿಗೆ ಹೊರಗುತ್ತಿಗೆ ನೀಡಿದ್ದಾರೆ. ಇದು ಕಾನೂನಿಗೆ ವಿರುದ್ಧ. ಬಡವರ ಮೇಲೆ ದಬ್ಬಾಳಿಕೆ ಸಹಿಸಲು ಸಾಧ್ಯವಿಲ್ಲ ಎಂದರು.

<><><>

ತುಮಕೂರಿನ ಮಹಾತ್ಮ ಗಾಂಧೀಜಿ ಕ್ರೀಡಾಂಗಣದಲ್ಲಿ ಧ್ವಜಾರೋಹಣ ನೆರವೇರಿಸಿ, ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ, ಗೃಹ ಖಾತೆ ಸಚಿವ ಜಿ.ಪರಮೇಶ್ವರ್, ಮೈಕ್ರೋ ಫೈನಾನ್ಸ್‌ರ್ಸ್ ವಿರುದ್ಧ, ಆರ್.ಬಿ.ಐ. ಕಾನೂನುಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು, ವಾರದೊಳಗೆ ಸುಗ್ರೀವಾಜ್ಞೆ ಹೊರಡಿಸಿ, ಕಠಿಣ ಕಾನೂನು ಜಾರಿಗೊಳಿಸಲಾಗುವುದು ಎಂದರು.

<><><>

76ನೇ ಗಣರಾಜ್ಯೋತ್ಸವ ನಿಮಿತ್ತ, ಇಂದು ಬೆಂಗಳೂರಿನ ರಾಜಭವನಕ್ಕೆ ಸಾರ್ವಜನಿಕರಿಗೆ ಉಚಿತ ಪ್ರವೇಶ ನೀಡಲಾಗುತ್ತಿದೆ. ರಾಜಭವನಕ್ಕೆ ಭೇಟಿ ನೀಡಬಯಸುವವರು, ಆಧಾರ್ ಕಾರ್ಡ್ ಅಥವಾ ಭಾವಚಿತ್ರವಿರುವ ಅಧಿಕೃತ ಗುರುತಿನ ಚೀಟಿಯೊಂದಿಗೆ, ಇಂದು ಸಂಜೆ 6 ರಿಂದ 7.30ರ ವರೆಗೆ ಭೇಟಿ ನೀಡಬಹುದು.

<><><>

76ನೇ ಗಣರಾಜ್ಯೋತ್ಸವದ ಹಿನ್ನೆಲೆ, ಚಿಕ್ಕಮಗಳೂರು ಜಿಲ್ಲಾ ಕ್ರೀಡಾಂಗಣದಲ್ಲಿ, ಫಲ ಪುಷ್ಪ ಪ್ರದರ್ಶನ ಆಯೋಜಿಸಲಾಗಿದೆ.

<><><>

ಮಡಿಕೇರಿಯ ರಾಜಾಸೀಟ್ ಪುಷ್ಪ ವನದಲ್ಲಿ, ಇಂದು ಸಮಾರೋಪಗೊಳ್ಳಲಿರುವ, ಫಲ ಪುಷ್ಪ ಪ್ರದರ್ಶನದಲ್ಲಿ, 7 ಸಾವಿರ ಹೂ ಕುಂಡಗಳಲ್ಲಿ, 20 ಸಾವಿರಕ್ಕೂ ಹೆಚ್ಚು ಪುಷ್ಪಗಳು ಕಂಗೊಳಿಸುತ್ತಿವೆ.

<><><>

ಚೊಚ್ಚಲ ಖೋಖೋ ವಿಶ್ವ ಕಪ್ ಗೆದ್ದ ಚಾಂಪಿಯನ್ಸ್, ಭಾರತೀಯ ತಂಡದಲ್ಲಿ, ಮೈಸೂರು ಜಿಲ್ಲೆ ಟಿ.ನರಸೀಪುರ ತಾಲೂಕಿನ, ಕುರುಬೂರು ಗ್ರಾಮದ ಯುವತಿ, ಬಿ. ಚೈತ್ರಾ ಸಹ ಒಬ್ಬರಾಗಿರುವುದು, ಹೆಮ್ಮೆಯ ಸಂಗತಿ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ. ಮಹದೇವಪ್ಪ ಶ್ಲಾಘಿಸಿದ್ದಾರೆ. ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚೈತ್ರಾ ಅವರು, ವಿಶ್ವ ವಿಜೇತ ಮಹಿಳಾ ಖೋಖೋ ತಂಡದ ಭಾಗವಾಗಿರುವುದು ನಾಡಿಗೆ ಹೆಮ್ಮೆಯ ಸಂಗತಿ. ಭಾರತೀಯರ ಪಾಲಿಗೆ ಐತಿಹಾಸಿ ಕ್ಷಣ ಎಂದರು.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಸೇವಾ ಭಾರತಿ ಟ್ರಸ್ಟ್‌ನ, ಬಾಲ ಕಲ್ಯಾಣ ಕೇಂದ್ರ, ಇಂದು ಬೆಳಗ್ಗೆ 10 ಹಾಗೂ ಮಧ್ಯಾಹ್ನ 2 ಗಂಟೆಗೆ, "ಭಾರತ್ ಕೋ ಜಾನೋ" ರಸಪ್ರಶ್ನೆ ಕಾರ್ಯಕ್ರಮವನ್ನು, ಎರಡು ಹಂತಗಳಲ್ಲಿ, ಕನ್ನಡ ಮಾಧ್ಯಮ ಶಾಲಾ ಮಕ್ಕಳಿಗೆ ಏರ್ಪಡಿಸಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ, 194ನೇ ಪುಣ್ಯತಿಥಿ ಹಿನ್ನೆಲೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಂಗಳೂರಿನಲ್ಲಿ ಗೌರವಾರ್ಪಿಸಿದರು.

<><><>

ಚಾಮರಾಜನಗರ ಜಿಲ್ಲೆ, ಮಲೈ ಮಹದೇಶ್ವರ ಬೆಟ್ಟದಲ್ಲಿ ಫೆಬ್ರವರಿ 17 ರಂದು, ಸಚಿವ ಸಂಪುಟ ಸಭೆ ನಡೆಯಲಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ತಿಳಿಸಿದ್ದಾರೆ.

<><><>

ಸಮಾಜ ಕಲ್ಯಾಣ ಖಾತೆ ಸಚಿವ ಎಚ್.ಸಿ.ಮಹದೇವಪ್ಪ, ಬೆಳಗಾವಿಯ ಹುಕ್ಕೇರಿಯಲ್ಲಿ, ಭಾರತರತ್ನ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಕಂಚಿನ ಪ್ರತಿಮೆಯನ್ನು ಅನಾವರಣಗೊಳಿಸಿದರು.

<><><>

ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ, 15ನೇ ಅಂತರ್ ಮಹಾವಿದ್ಯಾಲಯಗಳ ಯುವ ಜನೋತ್ಸವದ, ಕಲಾ ಸಂಭ್ರಮಕ್ಕೆ ಬಸವರಾಜ ಬೆಣ್ಣೆ ಚಾಲನೆ ನೀಡಿದರು.

<><><>

ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲೂಕು ನವನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ದಿವ್ಯಾ ಹಬೀಬ್ ಹಾಗೂ ಮುಖೇಶ ಪಾನಗಲ್ ವಿಶ್ವವಿಜ್ಞಾನ ದಿನಾಚರಣೆ ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 76ನೇ ಗಣರಾಜ್ಯೋತ್ಸವ; "ಸ್ವರ್ಣಿಮ್ ಭಾರತ; ವಿರಾಸತ್ ಮತ್ತು ವಿಕಾಸ" ಧ್ಯೇಯದೊಂದಿಗೆ, ನಾಡಿನಾದ್ಯಂತ ಸಂಭ್ರಮದಿಂದ ಆಚರಣೆ.
- ಜಾನಪದ ಕಲೆ ಗೋಂಧಳಿಯ ಎಲ್ಲ ಕಲಾವಿದರ ಪರವಾಗಿ, ಪದ್ಮ ಪುರಸ್ಕಾರ ಸ್ವೀಕಾರ – ವೆಂಕಪ್ಪ ಸುಗತೇಕರ.
- ಪಶ್ಚಿಮಘಟ್ಟ ರಕ್ಷಿಸುವ ಬದ್ಧತೆಯನ್ನು, ಯೋಜನೆಗಳ ಮೂಲಕ ತೋರ್ಪಡಿಸುವಂತೆ, ಪರಿಸರಾಸಕ್ತರ ಒತ್ತಾಯ.

- ಖಾಸಗಿ ಹಣಕಾಸು ಸಂಸ್ಥೆಗಳ ಕಿರುಕುಳ; ಜನತೆ ದೂರು ನೀಡಿದರೆ, ತಕ್ಷಣ ಕಾನೂನು ಕ್ರಮಕ್ಕೆ, ಮುಖ್ಯಮಂತ್ರಿ ಸೂಚನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>